# ನಗರಸಭಾ ಕಾರ್ಯಾಲಯ, ಶಿರಸಿ (ಉ.ಕ.)

ಸಂ. ನಸಶಿ/ಕಾ.ವಿ./ಟೆಂಡರು/ನಗರಸಭೆ ನಿಧಿ/ವಿವ-      /2009-10                                                  ದಿನಾಂಕ: 21-10-2009.

## ಟೆಂಡರು ಪ್ರಕಟಣೆ

ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಮತ್ತು ಕಾನೂನು ಹಾಗೂ ನಿಯಮಾವಳಿ-2000 ರಂತೆ ಲೋಕೋಪಯೋಗಿ ಇಲಾಖೆ ಹಾಗೂ ಶಿರಸಿ ನಗರಸಭೆಯಲ್ಲಿ ಪ್ರಸ್ತುತ ಸಾಲಿಗೆ ನೋಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ನಗರಸಭಾ ನಿಧಿ ಅಡಿಯಲ್ಲಿ ***ವಿವಿಧ ಕಾಮಗಾರಿಗಳಗೆ ಟೆಂಡರನ್ನು*** ಕರೆಯಲಾಗಿದೆ. ಭರ್ತಿ ಮಾಡಿದ ಟೆಂಡರುಗಳನ್ನು ಲಕೋಟೆಗಳಲ್ಲಿ ಇಟ್ಟು ಮೊಹರ್ ಬಂದ್ ಮಾಡಿ ಕಾಮಗಾರಿ ಹೆಸರು, ಗುತ್ತಿಗೆದಾರರ ಹೆಸರು, ವಿಳಾಸ ನಮೂದಿಸಿ ಈ ಕಚೇರಿಯಲ್ಲಿ ದಿನಾಂಕ: 23-11-2009ರ ಸಂಜೆ: 4:30 ಗಂಟೆಯವರೆಗೆ ಸಲ್ಲಿಸುವುದು. ಸ್ವೀಕೃತ ಟೆಂಡರುಗಳನ್ನು ದಿನಾಂಕ: 23-11-2009 ರಂದು ಸಂಜೆ: 5:00 ಗಂಟೆಗೆ ಹಾಜರಿರುವ ಗುತ್ತಿಗೆದಾರರ ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯಲಾಗುವುದು. ರಜೆ ಇದ್ದಲ್ಲಿ ಮುಂದಿನ ಕಚೇರಿ ವೇಳೆಯಲ್ಲಿ ತೆರೆಯಲಾಗುವುದು. ಇಲ್ಲವಾದಲ್ಲಿ ಮುಂದಿನ ದಿನಾಂಕಗಳನ್ನು ತಿಳಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಹಾಗೂ ಷರತ್ತುಗಳಿಗಾಗಿ ಕಚೇರಿಯ ಕೆಲಸದ ವೇಳೆಯಲ್ಲಿ ಖುದ್ದಾಗಿ ಬಂದು ಕೇಳಿ ತಿಳಿದುಕೊಳ್ಳತಕ್ಕದ್ದು.

1. ಖಾಲಿ ಟೆಂಡರು ನಮೂನೆಗಳಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ : 21-11-2009 (11:00 ಗಂಟೆವರೆಗೆ)
2. ಭರ್ತಿ ಮಾಡಲ್ಪಟ್ಟ ಹಾಗೂ ಮೊಹರಾದ ಟೆಂಡರು ನಮೂನೆಗಳನ್ನು ಸ್ವೀಕರಿಸುವ ದಿನಾಂಕ : 23-11-2009 (4:30 ಗಂಟೆಗೆ)
3. ಸ್ವೀಕೃತ ಟೆಂಡರುಗಳನ್ನು ತೆರೆಯುವ ಸ್ಥಳ ಹಾಗೂ ದಿನಾಂಕ : 23-11-2009 (5:00 ಗಂಟೆಗೆ)
   **ನಗರಸಭೆ ಕಚೇರಿ**

| ಕ್ರ.ಸಂ. | ಕಾಮಗಾರಿಯ ಹೆಸರು | ದರವಾರದ ವಿಧ | ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) | ಮುಂಗಡ ಠೇವಣಿ ಮೊತ್ತ | ಖಾಲಿ ಟೆಂಡರ್ ನಮೂನೆ ಶುಲ್ಕ | ಕಾಮಗಾರಿಯನ್ನು ಪೂರ್ಣಗೆ ೞಳಿಸುವ ಅವಧಿ | ಗುತ್ತಿಗೆದಾರರ ದರ್ಜೆ |
|---|---|---|---|---|---|---|---|
| 1 | ಮಾರಿಕಾಂಬಾ ಜಿಲ್ಲಾ ಕ್ರೀಡಾಂಗಣದಲ್ಲಿ ಶೌಚಾಲಯ ಕಟ್ಟಡ ನಿರ್ಮಿಸುವುದು. | ಶೇಕಡಾವಾರು | 4.25 | 1062-00 | 338-00 | 90 ದಿನಗಳು | 3ನೇ ದರ್ಜೆ ಹಾಗೂ ಮೇಲ್ಪಟ್ಟು |
| 2 | ಇಂದಿರಾನಗರದಲ್ಲಿ ಅಂಗನವಾಡಿ ಕಟ್ಟಡ ನಿರ್ಮಿಸುವುದು. | ಶೇಕಡಾವಾರು | 3.25 | 812-00 | 442-00 | 90 ದಿನಗಳು | ‘’ |
| 3 | ಶಿರಸಿ ನಗರಸಭೆ ಸ.ನಂ. 73ರ ಜಲಸಂಗ್ರಹಾಲಯ ಹತ್ತಿರದ ಜಾಗೆಯಲ್ಲಿ ವಾಣಿಜ್ಯ ಮಳಿಗೆ ನಿರ್ಮಿಸುವುದು. | ಐಟಂವಾರು | 9.80 | 2450-00 | 1019/- | 90 ದಿನಗಳು | ‘’ |
| 4 | ಶಿರಸಿ ನಗರಸಭೆ ಸ.ನಂ. 73ರ ಜಲಸಂಗ್ರಹಾಲಯ ಹತ್ತಿರದ ಜಾಗೆಯಲ್ಲಿ ಕ್ಯಾಂಟೀನ್ ನಿರ್ಮಿಸುವುದು. | ಶೇಕಡಾವಾರು | 1.20 | 600-00 | 260-00 | 75 ದಿನಗಳು | ‘’ |
| 5 | ವಾ.ನಂ. 3, ವಿಜಯಾ ಗ್ಯಾರೇಜ್ ಪಕ್ಕದ ರಸ್ತೆಗೆ ಡಾಂಬರಿಕರಣ ಹಾಗೂ ಲಮಾಣಿಗಲ್ಲಿ ರಸ್ತೆ ಬದಿಗೆ ಚರಂಡಿ ನಿರ್ಮಾಣ. | ಶೇಕಡಾವಾರು | 3.00 | 750-00 | 312-00 | 45 ದಿನಗಳು | ‘’ |
| 6 | ವಾ.ನಂ. 4, ರಂಗ್ಲೋ ಎಂಟರಪ್ರೈಸಸ್ ದಿಂದ ಬೆಳ್ಳಕ್ಕಿ ಕೆರೆಯ ತನಕ ಡಾಂಬರಿಕರಣ ಮಾಡುವುದು. | ಶೇಕಡಾವಾರು | 1.50 | 375-00 | 260-00 | 45 ದಿನಗಳು | ‘’ |
| 7 | ವಾ.ನಂ. 5, ಅನಂತ್ ಪೂಜಾರಿ ಮನೆಯ ಹತ್ತಿರ ರಸ್ತೆಗೆ ಪಿಚ್ಚಿಂಗ್ ನಿರ್ಮಿಸುವುದು. | ಶೇಕಡಾವಾರು | 2.00 | 500-00 | 260-00 | 30 ದಿನಗಳು | ‘’ |

| ಕ್ರ.ಸಂ. | ಕಾಮಗಾರಿಯ ಹೆಸರು | ದರವಾರದ ವಿಧ | ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) | ಮುಂಗಡ ಠೇವಣಿ ಮೊತ್ತ | ಖಾಲಿ ಟೆಂಡರ್ ನಮೂನೆ ಶುಲ್ಕ | ಕಾಮಗಾರಿಯನ್ನು ಪೂರ್ಣಗೆ ೞಳಿಸುವ ಅವಧಿ | ಗುತ್ತಿಗೆದಾರ ರ ದರ್ಜೆ |
|---|---|---|---|---|---|---|---|
| 8 | ವಾ.ನಂ. 6, ಗಣಪತಿ ನಾಯ್ಕ್ ಮನೆಯಿಂದ ಎಡ್ವಿನ್ ಮನೆಯವರೆಗೆ ಡಾಂಬರಿಕರಣ ಮಾಡುವುದು. | ಶೇಕಡಾವಾರು | 1.50 | 375-00 | 260-00 | 45 ದಿನಗಳು | 3ನೇ ದರ್ಜೆ ಹಾಗೂ ಮೇಲ್ಪಟ್ಟು |
| 9 | ವಾ.ನಂ. 7, ಮಂಜುನಾಥ ಕಾನಡೆ ಮನೆಯಿಂದ ಗೌತಮ್ ನಗರಕರ್ ಮನೆಯವರೆಗೆ ರಸ್ತೆಯ ಎರಡು ಬದಿಗೆ ಚರಂಡಿ ನಿರ್ಮಿಸುವುದು. | ಶೇಕಡಾವಾರು | 2.00 | 500-00 | 260-00 | 30 ದಿನಗಳು | ‘’ |
| 10 | ವಾ.ನಂ. 8, ವಿವೇಕಾನಂದನಗರ ವಿ.ಕೆ. ಹೆಗಡೆ ಮನೆಯ ಎದುರಿನ ರಸ್ತೆಗೆ ಡಾಂಬರಿಕರಣ ಮಾಡುವುದು. | ಶೇಕಡಾವಾರು | 3.10 | 775-00 | 322-00 | 45 ದಿನಗಳು | ‘’ |
| 11 | ವಾ.ನಂ. 8, ವಿವೇಕಾನಂದ ನಗರ ನರಸಿಂಹ ಭಟ್ ಮನೆಯಿಂದ ಕೆ.ಎಸ್. ಹೆಗಡೆ ಮನೆಯವರೆಗೆ ಡಾಂಬರಿಕರಣ ಮಾಡುವುದು. | ಶೇಕಡಾವಾರು | 4.00 | 1000-00 | 416-00 | 45 ದಿನಗಳು | ‘’ |
| 12 | ವಾ.ನಂ. 9, ಮುರ್ಡೇಶ್ವರ ಮಾಸ್ತರ್ ಮನೆಯ ಪಕ್ಕದ ಓಣಿ ರಸ್ತೆಗೆ ಕಾಂಕ್ರೀಟ್ ಅಳವಡಿಸುವುದು ಹಾಗೂ ಬಾವಿ ದುರಸ್ತಿ ಮಾಡುವುದು. | ಶೇಕಡಾವಾರು | 1.80 | 450-00 | 260-00 | 45 ದಿನಗಳು | ‘’ |
| 13 | ವಾ.ನಂ. 10, ವಿನಾಯಕ ಕಾಲೋನಿ ಶಾಮಕಳೆ ಹೊಳೆ ಮನೆಯಿಂದ ಶ್ರೀದೇವಿ ಪ್ರಸಾದ ನಿಲಯದವರೆಗೆ ಚರಂಡಿ ಹಾಗೂ ಡಾಂಬರಿಕರಣ ಮಾಡುವುದು. | ಶೇಕಡಾವಾರು | 2.30 | 575-00 | 260-00 | 45 ದಿನಗಳು | ‘’ |
| 14 | ವಾ.ನಂ. 13, ಕರ್ಜಗಿ ಮನೆಯಿಂದ ಯಶಸ್ವಿನಿ ನಿಲಯದವರೆಗೆ ಖಡೀಕರಣ ಹಾಗೂ ಸಿ.ಡಿ. ನಿರ್ಮಿಸುವುದು. | ಶೇಕಡಾವಾರು | 2.20 | 550-00 | 260-00 | 30 ದಿನಗಳು | ‘’ |
| 15 | ವಾ.ನಂ. 13, ಅಯ್ಯಪ್ಪನಗರ ರಸ್ತೆಗೆ ಖಡೀಕರಣ ಮಾಡುವುದು. | ಶೇಕಡಾವಾರು | 0.75 | 180-00 | 260-00 | 30 ದಿನಗಳು | ‘’ |
| 16 | ವಾ.ನಂ. 24, ನಾರ್ವೇಕರ್ ಮನೆಯಿಂದ ತಾರಿಮನೆ ಮನೆಯವರೆಗೆ ಚರಂಡಿ ನಿರ್ಮಾಣ. | ಶೇಕಡಾವಾರು | 1.50 | 375-00 | 260-00 | 30 ದಿನಗಳು | ‘’ |
| 17 | ವಾ.ನಂ. 25, ರೊಡ್ರಿಗ್ಸ್ ಮನೆಯಿಂದ ಮಳೆನೀರು ಚರಂಡಿಯವರೆಗೆ ರಸ್ತೆಗೆ ಡಾಂಬರಿಕರಣ ಮಾಡುವುದು. | ಶೇಕಡಾವಾರು | 2.00 | 500-00 | 260-00 | 45 ದಿನಗಳು | ‘’ |
| 18 | ವಾ.ನಂ. 26, ಶ್ರೀನಿಧಿ ನಿಲಯದಿಂದ ರಾಜು ಜೋಗಳೇಕರ್ ಮನೆಯವರೆಗೆ ಖಡೀಕರಣ ಮಾಡುವುದು. | ಶೇಕಡಾವಾರು | 1.70 | 425-00 | 260-00 | 30 ದಿನಗಳು | ‘’ |
| 19 | ವಾ.ನಂ. 28, ಅಂಬಾಗಿರಿಯ ಗ್ಯಾಸ್ ಗೌಡಾನ್‌ದಿಂದ ರಾಮಾ ನಾಯ್ಕ್ ಮನೆಯವರೆಗೆ ಹೋಗುವ ರಸ್ತೆಗೆ ಡಾಂಬರಿಕರಣ ಮಾಡುವುದು. | ಶೇಕಡಾವಾರು | 3.70 | 925-00 | 384-00 | 45 ದಿನಗಳು | ‘’ |

| ಕ್ರ.ಸಂ. | ಕಾಮಗಾರಿಯ ಹೆಸರು | ದರವಾರದ ವಿಧ | ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) | ಮುಂಗಡ ಠೇವಣಿ ಮೊತ್ತ | ಖಾಲಿ ಟೆಂಡರ್ ನಮೂನೆ ಶುಲ್ಕ | ಕಾಮಗಾರಿಯನ್ನು ಪೂರ್ಣಗೆಳಿಸುವ ಅವಧಿ | ಗುತ್ತಿಗೆದಾರರ ದರ್ಜೆ |
|---|---|---|---|---|---|---|---|
| 20 | ವಾ.ನಂ. 30, ಸತೀಶ್ ಶೆಟ್ಟಿ ಮನೆಯಿಂದ ಜಾಕೀರ ಮನೆಯವರೆಗೆ ಹಾಗೂ ಮಡಗಾಂವಕರ್ ಮನೆಯ ರಸ್ತೆಗೆ ಖಡೀಕರಣ ಮಾಡುವುದು. | ಶೇಕಡಾವಾರು | 0.70 | 175-00 | 260-00 | 30 ದಿನಗಳು | 4ನೇ ದರ್ಜೆ ಹಾಗೂ ಮೇಲ್ಪಟ್ಟು |
| 21 | ವಾ.ನಂ. 31, ರಾಮನಬೈಲ್ ಬಸಪ್ಪ ದೇವರ ಕ್ರಾಸ್‌ದಿಂದ ಫಕೀರಸಾಬ್ ಮನೆಯವರೆಗೆ ರಸ್ತೆಯ ಒಂದು ಬದಿಗೆ ಚರಂಡಿ ನಿರ್ಮಿಸುವುದು. | ಶೇಕಡಾವಾರು | 2.25 | 562-00 | 260-00 | 45 ದಿನಗಳು | 3ನೇ ದರ್ಜೆ ಹಾಗೂ ಮೇಲ್ಪಟ್ಟು |

**<u>ವಿಧಿಸಲಾಗಿರುವ ಪೂರ್ವ ಶರತ್ತುಗಳು:-</u>**

1. ಪ್ರಕಟಣೆ ಪ್ರಚುರಪಡಿಸಿದ ದಿನಾಂಕದಿಂದ ಖಾಲಿ ಟೆಂಡರಿಗೆ ಅರ್ಜಿಯನ್ನು ದಿನಾಂಕ: 21-11-2009, ಸಮಯ: 11:00 ಘಂಟೆಯವರೆಗೆ ಟೆಂಡರಿನಲ್ಲಿ ಭಾಗವಹಿಸಲು ಅರ್ಜಿ ಸಲ್ಲಿಸಬಹುದಾಗಿರುತ್ತದೆ.
2. ಗುತ್ತಿಗೆದಾರರು ಯಾವುದೇ ಶರತ್ತುಗಳನ್ನೊಳಗೊಂಡು ಸಲ್ಲಿಸಲಾಗುವ ಟೆಂಡರುಗಳನ್ನು ತಿರಸ್ಕರಿಸಲಾಗುವುದು.
3. ಗುತ್ತಿಗೆದಾರರು ಖಾಲಿ ಟೆಂಡರು ನಮೂನೆಗಳಿಗೆ ಅರ್ಜಿ ಸಲ್ಲಿಸುವಾಗ ನೋಂದಣಿ ಪ್ರಮಾಣ ಪತ್ರದ ದೃಢೀಕೃತ ಪ್ರತಿ ಮತ್ತು ಗುತ್ತಿಗೆದಾರರ ಪಾಸ್ ಪುಸ್ತಕವನ್ನು ಪರಿಶೀಲನೆಗಾಗಿ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.
4. ಟೆಂಡರ ಫಾರ್ಮ ಬೆಲೆಯನ್ನು ಡಿ.ಡಿ.ಯೊಂದಿಗೆ ಅಥವಾ ಪೋಸ್ಟಲ್ ಆರ್ಡರ್ ದೊಂದಿಗೆ ಪೌರಾಯುಕ್ತರು, ನಗರಸಭೆ, ಶಿರಸಿ ರವರ ಹೆಸರಿಗೆ ಖುಲ್ಲಾ ಟೆಂಡರ ಫಾರ್ಮಗೆ ಅರ್ಜಿ ಸಲ್ಲಿಸುವುದು. ಖುಲ್ಲಾ ಟೆಂಡರ್ ಫಾರ್ಮಗಳಿಗಾಗಿ ತುಂಬಿದ ಹಣವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಮತ್ತು ಬೇರೆ ಕೆಲಸಗಳಿಗೆ ವರ್ಗಾಯಿಸಲಾಗುವುದಿಲ್ಲ. (ನಗದು ಹಣ ಮತ್ತು ಚೆಕ್ಕುಗಳನ್ನು ಯಾವುದೇ ಕಾರಣಕ್ಕೂ ಸ್ವೀಕರಿಸಲಾಗುವುದಿಲ್ಲ).
5. ಗುತ್ತಿಗೆದಾರರು ಖಾಲಿ ಟೆಂಡರು ಫಾರ್ಮಗಳಿಗೆ ಅರ್ಜಿ ಸಲ್ಲಿಸುವಾಗ ಗುತ್ತಿಗೆ ಪ್ರಮಾಣ ಪತ್ರ ಹಾಗೂ ಸಂಬಂಧಿಸಿದ ಇಲಾಖೆಯಿಂದ ಪಡೆದ ಇತ್ತೀಚಿನ ಆದಾಯ ಕರ ಹಾಗೂ ಮಾರಾಟ ಕರ ತೀರುವಳಿಗೊಳಿಸಿದ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು.
6. ಗುತ್ತಿಗೆದಾರರು ನಿಗದಿತ ಮುಂಗಡ ಠೇವಣಿ ಮೊತ್ತವನ್ನು ಪೌರಾಯುಕ್ತರು, ನಗರಸಭೆ, ಶಿರಸಿ ರವರ ಪದನಾಮಕ್ಕೆ ಯಾವುದೇ ರಾಷ್ಟ್ರೀಕೃತ ಬ್ಯಾಂಕುಗಳಿಂದ ಪಡೆದ ಡಿ.ಡಿ. ಯನ್ನು ಸಲ್ಲಿಸುವುದು.
7. ಗುತ್ತಿಗೆದಾರರಿಗೆ ವಹಿಸಿಕೊಡಲಾಗಿರುವ ಕಾಮಗಾರಿಯನ್ನಾಗಲೀ ಕಾಮಗಾರಿಯ ಯಾವುದೇ ಭಾಗದ ನಿರ್ವಹಣೆಯನ್ನಾಗಲೀ ಯಾವುದೇ ವ್ಯಕ್ತಿಗೆ ಜಿ.ಪಿ.ಎ. ಮೂಲಕವಾಗಲೀ ಅಥವಾ ಇನ್ನಿತರ ರೀತಿಯಲ್ಲಿ ಉಪ ಗುತ್ತಿಗೆ ಆಧಾರದ ಮೇಲೆ ವಹಿಸಿಕೊಡುವುದನ್ನು ನಿಷೇಧಿಸಲಾಗಿದೆ.
8. ಗುತ್ತಿಗೆದಾರರು ಟೆಂಡರು ಅನುಮೋದನೆ ಪತ್ರವನ್ನು ಸ್ವೀಕರಿಸಿದ ಮೂರು ದಿನರೊಳಗೆ ಕರಾರು ಮಾಡಿಕೊಳ್ಳದಿದ್ದಲ್ಲಿ ಮತ್ತು ಕರಾರನ್ನು ಮಾಡಿಕೊಂಡ ಮರುದಿನವೇ ಕಾಮಗಾರಿಯನ್ನು ಪ್ರಾರಂಭಿಸದೇ ಇದ್ದಲ್ಲಿ ಮುಂಗಡ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಟೆಂಡರು ನಿಯಮಾನುಸಾರ ಕರಾರನ್ನು ರದ್ದುಗೊಳಿಸಲಾಗುವುದು. ಕಾಮಗಾರಿಯನ್ನು ನಿರ್ವಹಿಸಲು ಮರು-ಟೆಂಡರುಗಳನ್ನು ಕರೆದು ನಿಮ್ಮ ವೈಯಕ್ತಿಕ ಹೊಣೆ ಮತ್ತು ಹೆಚ್ಚುವರಿಯಾಗಿ ತಗಲುವ ಆರ್ಥಿಕ ವೆಚ್ಚವನ್ನು ನಿಮ್ಮಿಂದ ವಸೂಲಿ ಮಾಡಿಕೊಳ್ಳಲಾಗುವುದು.
9. ಸಕ್ಷಮ ಪ್ರಾಧಿಕಾರವು ಈ ಟೆಂಡರ್ ಪ್ರಕಟಣೆಯನ್ನಾಗಲೀ ಪ್ರಕಟಣೆಯಲ್ಲಿನ ಯಾವುದೇ ಅಥವಾ ಎಲ್ಲಾ ಕಾಮಗಾರಿಗಳನ್ನು ಯಾವುದೇ ಕಾರಣಗಳನ್ನು ನೀಡದೇ ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿದೆ.
10. ಕಾಮಗಾರಿಯನ್ನು ವಹಿಸಿಕೊಂಡ ಗುತ್ತಿಗೆದಾರರು ನಿಗದಿಗೊಳಿಸಿದ ಕಾಲ ಮಿತಿಯೊಳಗಾಗಿ ಪೂರ್ತಿಗೊಳಿಸತಕ್ಕದ್ದು. ಕುಂಠಿತ ಪ್ರಗತಿಗೆ ಟೆಂಡರು ನಿಯಮಾವಳಿಗಳ ಪ್ರಕಾರ ದಂಡ ವಿಧಿಸಲಾಗುವುದು.
11. ಟೆಂಡರಿಗೆ ಭಾಗವಹಿಸುವ ಗುತ್ತಿಗೆದಾರರು ನಿಗದಿಗೊಳಿಸಿದ ಟೆಂಡರು ಮೊತ್ತದ ಶೇ. 50%ರಷ್ಟು ಮೊಬಲಗಿನ ಕಾಮಗಾರಿಯನ್ನು ಕಳೆದ 5 ವರ್ಷದ ಕಾಲ ಮಿತಿಯೊಳಗಾಗಿ ನಿರ್ವಹಿಸಿದ ಅನುಭವ ಅರ್ಹತೆ ಹೊಂದಿರತಕ್ಕದ್ದು.
12. ಕಾಮಗಾರಿಯ ಮೂರು ಹಂತದ ಛಾಯಾ ಚಿತ್ರಗಳನ್ನು (ಕಾಮಗಾರಿ ಪೂರ್ವದಲ್ಲಿ, ಕಾಮಗಾರಿ ಪ್ರಗತಿಯಲ್ಲಿದ್ದಾಗ ಹಾಗೂ ಕಾಮಗಾರಿ ಪೂರ್ಣಗೊಂಡ ನಂತರ) ತಮ್ಮ ಸ್ವಂತ ಖರ್ಚಿನಲ್ಲಿ ತಗೆದು ಸಲ್ಲಿಸತಕ್ಕದ್ದು.
13. ಯಶಸ್ವಿ ಗುತ್ತಿಗೆದಾರರು ಟೆಂಡರು ದರ ಅನುಮೋದನೆಯಾದ 20 ದಿನದೊಳಗಾಗಿ ಶೇ. 5%ರ ಭದ್ರತಾ ಠೇವನ್ನು ಹಾಗೂ ಅಂದಾಜು ಪತ್ರಿಕೆಗಿಂತ ಕಡಿಮೆ ದರ ನಮೂದಿಸಿದ ವ್ಯತ್ಯಾಸದ ಮೊಬಲಗನ್ನು ಡಿ.ಡಿ. ಅಥವಾ ಎನ್.ಎಸ್.ಸಿ., ಬ್ಯಾಂಕ್ ಠೇವು ಹಾಗೂ ಬ್ಯಾಂಕ್ ಗ್ಯಾರಂಟಿಯನ್ನು ಪೌರಾಯುಕ್ತರು, ನಗರಸಭೆ, ಶಿರಸಿರವರ ಹೆಸರಿಗೆ ನೀಡತಕ್ಕದ್ದು.

14. ಗುತ್ತಿಗೆದಾರರು ಕಾಮಗಾರಿಯ ಕಾರ್ಯಾದೇಶ ಪಡೆದ ದಿನಾಂಕದಂದು ಸ್ಥಳವನ್ನು ಹಸ್ತಾಂತರಿಸಲಾಗಿದೆಯೆಂದು ತಿಳಿಯತಕ್ಕದ್ದು.
15. ಕಾಮಗಾರಿಯ ಸಂಪೂರ್ಣ ಮಾಹಿತಿಯುಳ್ಳ ಸೂಚನಾ ಫಲಕವನ್ನು ಗುತ್ತಿಗೆದಾರರು ತಮ್ಮ ಸ್ವಂತ ಖರ್ಚಿನಲ್ಲಿಯೇ ಕಾಮಗಾರಿ ಸ್ಥಳದಲ್ಲಿ ಅಳವಡಿಸತಕ್ಕದ್ದು.
16. ಕಾಮಗಾರಿಯಲ್ಲಿ ಯಾವುದೇ ಕಾರಣಕ್ಕೂ ಬಾಲಕಾರ್ಮಿಕರನ್ನು ಉಪಯೋಗಿಸುವುದನ್ನು ನಿಷೇಧಿಸಲಾಗಿದೆ. ಮತ್ತು ಕಾಮಗಾರಿಯಲ್ಲಿ ಕೆಲಸ ನಿರ್ವಹಿಸುವ ಎಲ್ಲಾ ತರಹದ ಕೆಲಸಗಾರರ ಸುರಕ್ಷತೆ ನಿಮ್ಮದೇ ಪೂರ್ಣ ಜವಾಬ್ದಾರಿಯಾಗಿದ್ದು, ಸದರಿ ಕಾಮಗಾರಿ ವೇಳೆಯಲ್ಲಿ ಯಾವುದೇ ಪ್ರಾಣ ಅಥವಾ ಹಾನಿ ಸಂಭವಿಸಿದ್ದಲ್ಲಿ ಸಂಪೂರ್ಣ ಜವಾಬ್ದಾರಿ ನಿಮ್ಮದ್ದಾಗಿರುತ್ತದೆ.
17. ಕಾಮಗಾರಿಗೆ ಬೇಕಾಗುವ ಕಚ್ಚಾ ವಸ್ತು ಮತ್ತು ಸಾಮಗ್ರಿಗಳನ್ನು ಶೇಖರಣೆ ಮಾಡುವಾಗ ಸಾರ್ವಜನಿಕರ ಓಡಾಟಕ್ಕೆ ಮತ್ತು ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ಶೇಖರಿಸುವುದು. ಈ ರೀತಿಯಾಗಿ ಶೇಖರಿಸುವ ಸಾಮಗ್ರಿಗಳ ನಿರ್ವಹಣೆಯಿಂದ ರಸ್ತೆಗೆ ಅಥವಾ ಇನ್ನಿತರ ಜಾಗೆಗಳಿಗೆ ಹಾನಿಯಾದ್ದಲ್ಲಿ ಅದನ್ನು ನೀವೇ ಭರಿಸತಕ್ಕದ್ದು.
18. ಈ ಮೇಲಿನ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದ್ದು ಗಮನಕ್ಕೆ ಬಂದಲ್ಲಿ ಕರಾರು ಉಲ್ಲಂಘನೆ ಮಾಡಿದಕ್ಕೆ ಕ್ರಮಜರುಗಿಸಲಾಗುವುದು.
19. ಈ ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಬೇಕಾಗಿದ್ದಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು, ತಾಂತ್ರಿಕ ವಿಭಾಗ, ನಗರಸಭೆ, ಶಿರಸಿ ಇವರಲ್ಲಿ ಪಡೆದುಕೊಳ್ಳಬಹುದಾಗಿದೆ ಹಾಗೂ ನಗರಸಭೆಯ ವೆಬ್‌ಸೈಟ್ ರಲ್ಲಿ ಪಡೆಯಬಹುದಾಗಿದೆ.
20. ಸಂಪರ್ಕ ದೂರವಾಣಿ ಸಂಖ್ಯೆ 08384–226338, ಈ–ಮೇಲ್: comm_srs@yahoo.com ಹಾಗೂ sr_programmer_sirsi@yahoo.in

ಅಧ್ಯಕ್ಷರು,
ನಗರಸಭೆ, ಶಿರಸಿ.

ಪೌರಾಯುಕ್ತರು,
ನಗರಸಭೆ, ಶಿರಸಿ.